# ನೀರಿನ ಗುಳ್ಳೆಗಳು



ದೊಡ್ಡ ದೊಡ್ಡ ನೀರಿನ ಗುಳ್ಳೆಗಳು
ಸಣ್ಣ ಸಣ್ಣ ನೀರಿನ ಗುಳ್ಳೆಗಳು
ಇವೆ ನನ್ನ ನೆನಪಿನ ಅಂಗಳದಲ್ಲಿ
ಎನ್ನುತ್ತಾಳೆ ಪೂಪ

ಮಳೆ ನೀರಿಗೆ ಹನಿಗಳು ಥಟ್ ಪಟ್ ಬಿದ್ದು
ಗುಳ್ಳೆಗಳಲ್ಲಿಂದ ಒಡನೆಯೆ ಎದ್ದು
ಏನು ಮಾಡಲಿ ಎಲ್ಲಿ ಹೋಗಲಿ
ಎಂದು ತಿಳಿಯದೆ ಗಲಿಬಿಲಿಯಲ್ಲಿ
ಅತ್ತ ಹೋಗುತ್ತವೆ ಇತ್ತ ಬರುತ್ತವೆ
ಅಂಗಳದ ಕೊನೆ ನಮ್ಮ ಗುರಿಯೆನ್ನುತ್ತವೆ

ಹುಟ್ಟಿದ ಕೂಡಲೆ ಕೆಲವೊಡೆಯುತ್ತವೆ
ಕೆಲವಾಮೇಲೆ ಕಾಣದಾಗುತ್ತವೆ
ಒಡೆಯದ ಗುಳ್ಳೆಯು ಯಾವುದು ಇಲ್ಲ
ಯಾತಕೆ ಹೀಗೋ ದೇವರೆ ಬಲ್ಲ
ತಿಳಿದವರಿಗದು ಒಂದು ಜೀವನ ದರುಶನ
ನಮಗದು ಗಾಳಿ ಮಳೆಯ ಪ್ರದರ್ಶನ

ನಾವು ಲೆಕ್ಕ ಕಲಿತಿದ್ದೀ ಗುಳ್ಳೆಯನೆಣಿಸಿ
ಕನಸು ಕಂಡದ್ದೂ ಅವುಗಳ ನೆನಸಿ

ಏನೇ ಇರಲಿ ಎಲ್ಲೇ ಇರಲಿ
ಇರಲವು ಅರ್ಧ ಗೋಲಾಕಾರದಿ
ಇಡೀ ಲೋಕವ ತಮ್ಮಲಿ ಬಿಂಬಿಸಿ
ಇರುವಷ್ಟೂ ಕ್ಷಣ ಸಂತೋಷ ತರಿಸಿ
ಎಂದು ಹಾರೈಸುತಾಳೆ ಪೂಪ
ಅವಳು ಇನ್ನೇನು ಮಾಡ್ತಾಳೆ ಪಾಪ!

**(ಟಿಪ್ಪಣಿ: ಪೂಪ ಎಂದರೆ ಲ್ಯಾಟಿನ್ ಭಾಷೆಯಲ್ಲಿ ಪುಟ್ಟ ಹುಡುಗಿ, ಬೊಂಬೆ ಎಂದು ಅರ್ಥ)**